ಇ) ಈ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರುಗಳ ಹುದ್ದೆಯ ವಿವರ ಕೆಳಕಂಡಂತೆ ಇದೆ.

ಮಂಜೂರು	ಕಾರ್ಯನಿರತ	ಖಾಲಿ
11	5	6

ಈ ಹಿಂದೆ ಸಾರ್ವಜನಿಕ ಆಸ್ಪತ್ರೆ ತೀರ್ಥಹಳ್ಳಿ ಇಲ್ಲಿಗೆ ನೇಮಕವಾಗಿ ಕರ್ತವ್ಯಕ್ಕೆ ಹಾಜರಾಗದೇ ಇರುವ ಕೆಳಕಂಡ ವೈದ್ಯರನ್ನು ಅಮಾನತ್ತಿನಲ್ಲಿಡಲಾಗಿತ್ತು ಮತ್ತು ಶಿಸ್ತುಕ್ರಮಕ್ಕೆ ಇಲಾಖಾ ವಿಚಾರಣೆ ನಡೆಸಲಾಗುತ್ತಿದೆ.

1. ಡಾ।। ಶಾಲಿನಿ ಕುಮಾರಿ
2. ಡಾ।। ವನಜಾಕ್ಷಿ
3. ಡಾ।। ಎಂ.ಎ. ಬಿಂದುರಾಣಿ
4. ಡಾ।। ಕೆ. ರೇಖಾ

ಈ ಆಸ್ಪತ್ರೆಗೆ ತಜ್ಞರ ಸೇವೆಯು ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಖಾಲಿ ಹುದ್ದೆಗಳನ್ನು ವರ್ಗಾವಣೆ ಸರ್ಕಾರಿ ಸೇವೆಯಿಂದ ನಿವೃತ್ತರಾದ ತಜ್ಞರ ನೇಮಕಾತಿ ಮೂಲಕ ತುಂಬಲು ಅಥವಾ ಖಾಸಗಿ ತಜ್ಞರ ಸೇವೆಯನ್ನು ಗೌರವಧನ ಅಥವಾ ಪ್ರತಿ ಭೇಟಿ ಆಧಾರದಲ್ಲಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿನ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಕಟ್ಟಡದ ಸೌಲಭ್ಯದ ಕುರಿತು

49 (118) - ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಕಟ್ಟಡದ ಸೌಲಭ್ಯದ ಬಗೆಗೆ ಹಾಗೂ ಕೊಠಡಿಗಳ ಕೊರತೆಯ ನಿವಾರಣೆಗಾಗಿ ಸರ್ಕಾರ ವಿಶೇಷ ಕಾರ್ಯಕ್ರಮವನ್ನೇನಾದರೂ ರೂಪಿಸಿದೆಯೇ?

ಆ) ಹಾಗಿದ್ದಲ್ಲಿ ಆದರ ವಿವರಗಳೇನು;

ಇ) ಮಂಡ್ಯ ನಗರದಲ್ಲಿನ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಕೊಠಡಿಗಳ ಸಂಖ್ಯೆಯು ಕಡಿಮೆ ಇದ್ದು, ಸ್ಥಳಾಭಾವದ ಸಮಸ್ಯೆಯನ್ನು ಸರ್ಕಾರವು ಮನಗಂಡಿದೆಯೇ;

ಈ) ಕೊಠಡಿಗಳ ಕೊರತೆಯನ್ನು ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಡಾ।। ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ಕಾಲೇಜುಗಳ ಅವಶ್ಯಕತೆಗನುಗುಣವಾಗಿ ಕಟ್ಟಡಗಳನ್ನು ನಿರ್ಮಿಸಲು ಯೋಜನೆಯನ್ನು ರೂಪಿಸಲಾಗಿದ್ದು, ಹುಡ್ಕೋ ಸಂಸ್ಥೆಯಿಂದ ನೆರವು ಪಡೆಯಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಹುಡ್ಕೋ ನೇರವು ದೊರೆತ ಕೂಡಲೇ ಕಟ್ಟಡಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ಹೌದು

ಈ) ಹುಡ್ಕೋದಿಂದ ಆರ್ಥಿಕ ನೆರವು ದೊರೆತ ನಂತರ ಕೊಠಡಿಗಳ ಕೊರತೆ ನಿವಾರಿಸಲು ಕ್ರಮಕೈಗೊಳ್ಳಲಾಗುವುದು.

ರಾಜ್ಯದಲ್ಲಿನ ಆಯುರ್ವೇದ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ

51 (120) - ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) : ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಆಯುರ್ವೇದ ಆಸ್ಪತ್ರೆಗಳ ಸಂಖ್ಯೆ ಎಷ್ಟು?

ಆ) ಈ ಆಸ್ಪತ್ರೆಗಳಲ್ಲಿರುವ ವೈದ್ಯರ ಸಂಖ್ಯೆ ಎಷ್ಟು?

ಇ) ಮಂಜೂರಾಗಿರುವ ವೈದ್ಯರ ಹುದ್ದೆಯಲ್ಲಿ ವೈದ್ಯರಿಲ್ಲದೆ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;

ಈ) ಆಯುರ್ವೇದ ಆಸ್ಪತ್ರೆಗಳಲ್ಲಿ ಕೊರತೆ ಇರುವ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಗಳನ್ನು ಭರ್ತಿ ಮಾಡಲು ಸರಕಾರ ಈವರೆಗೆ ಯಾವ ಕ್ರಮ ಕೈಗೊಂಡಿದೆ?

ಶ್ರೀಮತಿ ನಫೀಸ್ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು) :

ಅ) ಆಸ್ಪತ್ರೆಗಳು : 75

ಚಿಕಿತ್ಸಾಲಯಗಳು : 541

ಆ) ಖಾಯಂ ವೈದ್ಯರ ಸಂಖ್ಯೆ : 450

ಗುತ್ತಿಗೆ ವೈದ್ಯರ ಸಂಖ್ಯೆ : 203

ಇ) 30

ಈ) ಇಲಾಖೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ವಿಶೇಷ ನೇಮಕಾತಿ ಅಧಿಸೂಚನೆಯ ಸಂಖ್ಯೆ ಡಿಪಿಎಆರ್ 89 ಎಸ್ಆರ್‌ಡಿ 2001 ದಿನಾಂಕ 29-5-2002 ರೀತ್ಯ ಭರ್ತಿ ಮಾಡಿಕೊಳ್ಳಲು ಸರ್ಕಾರವು ಕ್ರಮ ಕೈಗೊಳ್ಳುತ್ತಿದೆ. ಉಳಿದ ಕೊರತೆಯಿರುವ ವೈದ್ಯಕೀಯ ಸಿಬ್ಬಂದಿ ಹುದ್ದೆಗಳಾದ ಶುಶ್ರೂಷಕ್ಷಿಯರು ಹಾಗೂ ಔಷಧಿ ವಿತರಕರುಗಳ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಿ ತರಬೇತಿಗೊಳಿಸಲು ತರಬೇತಿ ನಿಯಮ ಮತ್ತು ಪಠ್ಯ ಕ್ರಮಗಳನ್ನು ಪರಿಷ್ಕರಣೆ ಮಾಡಲಾಗುತ್ತಿದೆ. ಗ್ರೂಪ್-ಡಿ ಹುದ್ದೆಗಳನ್ನು ಸಕ್ರಮ ಗೊಳಿಸಲಾಗಿರುವ ದಿನಗೂಲಿ ನೌಕರರಿಂದ ಭರ್ತಿ ಮಾಡಲು ಸರ್ಕಾರದ ಆದೇಶದ ದಿನಾಂಕ 23-11-95ರ ಪ್ರಕಾರ ಆಯಾ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ. ಈಗಾಗಲೇ ಈ ಹಿಂದೆ ಹಲವು ಹುದ್ದೆಗಳನ್ನು ಈ ಮೂಲಕ ಭರ್ತಿ ಮಾಡಲಾಗಿದೆ.